# ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

[ಕರ್ನಾಟಕ ಸರ್ಕಾರದ ಸಂಪೂರ್ಣ ಸಾಮ್ಯಕ್ಕೆ ಒಳಪಟ್ಟಿದೆ]
ಕಂಪನಿ ಕಾರ್ಯಾಲಯ, ನವನಗರ, ಹುಬ್ಬಳ್ಳಿ- 580 025.
**Company Identity Number[CIN]: U04010KA2002PLC030437**

# ನೇಮಕಾತಿ- ಕಾಯ್ದಿರಿಸಿದ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಣೆ

## ಅಧಿಸೂಚನೆ

ಕ್ರಮ ಸಂಖ್ಯೆ: ಹೆಚ್.ಸಿ.ಓ.-07/ಸಿ.81/2017-18, ದಿನಾಂಕ: **29ನೇ ಫೆಬ್ರವರಿ, 2020**.

ವಿಷಯ: ಸಹಾಯಕ ಲೆಕ್ಕಾಧಿಕಾರಿ, ಸಹಾಯಕ ಮತ್ತು ಕಿರಿಯ ಸಹಾಯಕ ಹುದ್ದೆಗಳ ಕಾಯ್ದಿರಿಸಿದ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಣೆ ಕುರಿತು.

ಉಲ್ಲೇಖ:
1. ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ ಬಿ16/ 40360/ 2016-17, ದಿನಾಂಕ: 08.09.2016.
2. ನೇಮಕಾತಿ-ಅಂತಿಮ ಆಯ್ಕೆ ಪಟ್ಟಿ ಪ್ರಕಟಣೆ ಅಧಿಸೂಚನೆ: ಹುವಿಸಕಂನಿ/ ಪ್ರವ್ಯ/ ಲೆ[ಆ]/ ಸಲೆ[ಆ]/ ಹಿಸ[ಆ-1]/ ನೇಪ್ರ/ ವಿವ-05/ 2016-17/ CYS-6105, ದಿನಾಂಕ: 13.03.2018.
3. ನೇಮಕಾತಿ- ಕಾಯ್ದಿರಿಸಿದ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಣೆ ಅಧಿಸೂಚನೆ: ಹೆಚ್.ಸಿ.ಓ.-07/ಸಿ.-81/ 2017-18, ದಿನಾಂಕ: 04.02.2020.
4. ಅಧಿಸೂಚನೆ: ಹೆಚ್.ಸಿ.ಓ.-07/ಸಿ.81/ 2017-18, ದಿನಾಂಕ: 28.02.2020.

********

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ ಬಿ16/ 40360/ 2016-17, ದಿನಾಂಕ: 08.09.2016 ಕ್ಕೆ ಅನುಗುಣವಾಗಿ, ಹು.ವಿ.ಸ.ಕಂ.ನಿ.ಯ ನೇಮಕಾತಿ-ಅಂತಿಮ ಆಯ್ಕೆ ಪಟ್ಟಿ ಪ್ರಕಟಣೆಯನ್ನು ಅಧಿಸೂಚನೆ ಸಂಖ್ಯೆ: ಹುವಿಸಕಂನಿ/ ಪ್ರವ್ಯ/ ಲೆ[ಆ]/ ಸಲೆ[ಆ]/ ಹಿಸ[ಆ-1]/ ನೇಪ್ರ/ ವಿವ-05/ 2016-17/ CYS-6105, ದಿನಾಂಕ: 13.03.2018 ರಲ್ಲಿ ಹಾಗೂ ಕಾಯ್ದಿರಿಸಿದ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಣೆಯನ್ನು ಅಧಿಸೂಚನ ಸಂಖ್ಯೆ: ಹೆಚ್.ಸಿ.ಓ.-07/ಸಿ.-81/ 2017-18, ದಿನಾಂಕ: 04.02.2020 ರಲ್ಲಿ ಪ್ರಕಟಿಸಲಾಗಿರುತ್ತದೆ. ಮುಂದುವರೆದು, ಸದರಿ ಅಧಿಸೂಚನೆ ಸಂಖ್ಯೆ: ಹೆಚ್.ಸಿ.ಓ.-07/ಸಿ.-81/ 2017-18, ದಿನಾಂಕ: 04.02.2020 ರಲ್ಲಿ ಸಹಾಯಕ ಲೆಕ್ಕಾಧಿಕಾರಿ, ಸಹಾಯಕ ಮತ್ತು ಕಿರಿಯ ಸಹಾಯಕ ಹುದ್ದೆಗಳಿಗೆ ಪ್ರಕಟಿಸಿರುವ ಕಾಯ್ದಿರಿಸಿದ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಆಡಳಿತಾತ್ಮಕ ಕಾರಣಗಳಿಂದ ಅಧಿಸೂಚನೆ: ಹೆಚ್.ಸಿ.ಓ.-07/ಸಿ.81/ 2017-18, ದಿನಾಂಕ: 28.02.2020 ರನ್ವಯ ಹಿಂಪಡೆಯಲಾಗಿರುತ್ತದೆ.

ಪ್ರಕಟಿತ ಹುದ್ದೆಗಳಲ್ಲಿ ಅರ್ಹ ಅಭ್ಯರ್ಥಿಗಳ ಕೊರತೆ ಇರುವ ಸಹಾಯಕ ಲೆಕ್ಕಾಧಿಕಾರಿ, ಸಹಾಯಕ ಮತ್ತು ಕಿರಿಯ ಸಹಾಯಕ ಹುದ್ದೆಗಳಲ್ಲಿ ಅಂತಿಮ ಆಯ್ಕೆ ಪಟ್ಟಿಯಲ್ಲಿರುವ ಅಭ್ಯರ್ಥಿಗಳ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳ ಸಿಂಧುತ್ವವನ್ನು ಸಕ್ಷಮ ಪ್ರಾಧಿಕಾರಿಗಳಿಂದ ಸ್ವೀಕೃತವಾಗದಿರುವ ಅಭ್ಯರ್ಥಿಗಳ ಅಭ್ಯರ್ಥಿತನವನ್ನು ರದ್ದುಗೊಳಿಸಿ ಹಾಗೂ ನೇಮಕಾತಿ ಆದೇಶ ಜಾರಿ ಮಾಡಲಾದ ಅಭ್ಯರ್ಥಿಗಳು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೇ ಇರುವ ಅಭ್ಯರ್ಥಿಗಳಿಂದ ಉಂಟಾದ ರಿಕ್ತ ಸ್ಥಾನಗಳಿಗೆ, ಜ್ಯೇಷ್ಠತೆ ಮತ್ತು ಆಯ್ಕೆ ನಿಯಮಾವಳಿಗಳ ಆಧಾರದ ಮೇರೆಗೆ ಕಾಯ್ದಿರಿಸಿದ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಮತ್ತು ಕಟ್–ಆಫ್ [Cut-Off] ಅಂಕಗಳೊಂದಿಗೆ ಹು.ವಿ.ಸ.ಕಂ.ನಿ. ಅಂತರ್ಜಾಲದಲ್ಲಿ ಪ್ರಕಟಿಸಲಾಗಿದೆ.

ಸದರಿ ಕಾಯ್ದಿರಿಸಿದ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಸಮಂಜಸವಾದ ಆಕ್ಷೇಪಣೆಗಳಿದ್ದಲ್ಲಿ, 1:2 ರ ಅನುಪಾತ ಹಾಗೂ ದಿನಾಂಕ: 05.02.2018, ದಿನಾಂಕ: 17.03.2018, ದಿನಾಂಕ: 14.09.2018 ಮತ್ತು ದಿನಾಂಕ: 12.11.2018 ರಂದು ದಾಖಲಾತಿ ಪರಿಶೀಲನೆಗಾಗಿ ಹಾಜರಾದ ಅಭ್ಯರ್ಥಿಗಳು ಮಾತ್ರ, ಸೂಕ್ತ ವಿವರ ಹಾಗೂ ದಾಖಲಾತಿಗಳೊಂದಿಗೆ, ತಮ್ಮ ಹೆಸರು, ಅರ್ಜಿ ನೋಂದಣಿ ಸಂಖ್ಯೆ ಹಾಗೂ ಅರ್ಜಿ ಸಲ್ಲಿಸಿದ್ದ ಹುದ್ದೆಯ ಹೆಸರಿನೊಂದಿಗೆ ಕಂಪನಿಯ ಈ-ಮೇಲ್ ಐಡಿ hescomrecruitment@gmail.com ಗೆ ದಿನಾಂಕ: 11ನೇ ಮಾರ್ಚ, 2020 ರ ಒಳಗಾಗಿ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿದೆ.

**ಆನ್-ಲೈನ್ [ಈ-ಮೇಲ್] ಮೂಲಕ ಹೊರತುಪಡಿಸಿ, ಇನ್ನಾವುದೇ ಮಾರ್ಗದಿಂದ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.**

ನಿಗದಿತ ದಿನಾಂಕದ ನಂತರ ಸಲ್ಲಿಸಲಾಗುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಪ್ರಧಾನ ವ್ಯವಸ್ಥಾಪಕರು
[ಆಡಳಿತ ಮತ್ತು ಮಾ.ಸಂ.ಅ]